ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಯಲಹಂಕ ವಲಯ

ಸಂಖ್ಯೆ: ಬೃ.ಬೆಂ.ಮ.ಪಾ/ಕಾ.ಅ/ಬ್ಯಾ.ವಿ/ಆ.ಅ/47/2023–24

ಕಾರ್ಯಪಾಲಕ ಅಭಿಯಂತರರು ಕಛೇರಿ
ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ,
ಬೆಂಗಳೂರು–92, ದಿನಾಂಕ: 26–12–2023

ಆಡಳಿತಾತ್ಮಕ ಅನುಮೋದನೆ

ವಿಷಯ: Supplying and Laying of various bituminous mixes for repair of potholes and Road cut Portions from established Hot Mix Plant of minimum 50/80 TPH capacity (In Fully working condition) including manufacturing, supplying and laying including the cost of all materials, machineries, labours, consumables etc complete for a period of 2 years in Byatarayanapura Division.

ಉಲ್ಲೇಖ: ವಾರ್ಡ್ ಮಟ್ಟದ ಲೊಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಮಾನ್ಯ ಆಡಳಿತಗಾರರು ದಿನಾಂಕ: 19–12–2023 ರಂದು ನಡೆಸಿದ ಸಭೆಯ ನಡವಳಿ ವಿಷಯ ಸಂಖ್ಯೆ: 134/2023–24.

* * * * *

ಮೇಲಿನ ವಿಷಯಕ್ಕೆ ಸಂಬಂದಿಸಿದಂತೆ, 2023–24ನೇ ಸಾಲಿನ ಆಯವ್ಯಯದ ಪಿ–3726 ರಡಿಯಲ್ಲಿ ಮೀಸಲಿಟ್ಟಿರುವ ಅನುದಾನದಡಿಯಲ್ಲಿ ಬ್ಯಾಟರಾಯನಪುರ ವಿಭಾಗ ವ್ಯಾಪ್ತಿಯ ವಾರ್ಡ್‌ಗಳಲ್ಲಿ ರಸ್ತೆಗುಂಡಿಗಳನ್ನು ಮುಚ್ಚುವ ಮೇಲ್ಕಂಡ ವಿಷಯದಲ್ಲಿನ ರೂ. 150.00 ಲಕ್ಷಗಳ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನಿರೀಕ್ಷಿಸಿ ಟೆಂಡರ್ ಪ್ರಕ್ರಿಯೇ ಕೈಗೊಂಡಿದ್ದು, ಉಲ್ಲೇಖದಂತೆ ಸದರಿ ಕಾಮಗಾರಿಯ ಟೆಂಡರ್‌ಗೆ ಅನುಮೋದನೆ ಮತ್ತು ಘಟನೋತ್ತರ ಆಡಳಿತಾತ್ಮಕ ಅನುಮೋದನೆ ನೀಡಿರುವುದರಿಂದ, ಮಾನ್ಯ ಮುಖ್ಯ ಆಯುಕ್ತರು ರವರು ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ: ಬಿ12(1)/ಪಿ.ಆರ್/394/21–22, ದಿನಾಂಕ: 06–12–2023 ರಲ್ಲಿ ನೀಡಿರುವ ಅಧಿಕಾರದನ್ವಯ ಸದರಿ ಕಾಮಗಾರಿಯ ರೂ. 150.00 ಲಕ್ಷಗಳಿಗೆ (ಒಂದು ಕೋಟಿ ಐವತ್ತು ಲಕ್ಷ ಮಾತ್ರ) ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಮತ್ತು ಆಡಳಿತಾತ್ಮಕ ಅನುಮೋದನೆಯ ಪುಸ್ತಕದ ಪುಟ ಸಂಖ್ಯೆ 16 ರಲ್ಲಿ ನಮೂದಿಸಿ, ಈ ಕೆಳಗಿನ ಷರತ್ತುಗಳಿಗೊಳಪಡಿಸಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಷರತ್ತುಗಳು:

1. ಅಂದಾಜು ಪಟ್ಟಿಯ ಮೊತ್ತ ರೂ 2.00 ಲಕ್ಷಗಳಿಗೆ ಮೀರಿದ ಕಾಮಗಾರಿಗಳಿಗೆ ಟೆಂಡರ್ ಕರೆಯುವುದು.
2. ರಸ್ತೆ ಇತಿಹಾಸ ಪುಸ್ತಕದಲ್ಲಿ (Road History book/Register) ಈ ಕೆಲಸದ ವಿವರಗಳನ್ನು ದಾಖಲಿಸಿ ಕ್ರಮಬದ್ದಗೊಳಿಸುವುದು.
3. ಧರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆಟಾ ಧರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
4. ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಷನ್ ಕರೆದು ಅನುಮೋದನೆ ಪಡೆಯುವುದು.
5. ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
6. ಆರ್.ಸಿ.ಸಿ ಡೆಕ್‌ಸ್ಲಾಬ್, ಹರಿನೀರು ಮೋರಿಯ ಆಸರೆಗೋಡೆ ಮತ್ತು ಸೇತುವೆ ಕೆಲಸಗಳ ನಿರ್ವಹಣೆಗೆ ಮೊದಲು ವಿನ್ಯಾಸಕ್ಕೆ ಅನುಮೋದನೆ ಪಡೆಯುವುದು.
7. ಮೇಲಿನ ಕೆಲಸದ ವೆಚ್ಚವನ್ನು ಉಪ ಅನುದಾನದಡಿಯಲ್ಲಿ ಭರಿಸುವುದು.
8. ಬಿ.ಎಂ./ಬಿ.ಸಿ. ಅಳವಡಿಸಿಕೊಂಡಿರುವ ರಸ್ತೆಗಳಿಗೆ ನಿಯಮಾನುಸಾರ ಪರೀಕ್ಷೆಗಳನ್ನು ಕೈಗೊಂಡು ಫಲಿತಾಂಶದ ವರದಿಗಳನ್ನು ಪಡೆದುಕೊಳ್ಳುವುದು.
9. ಸದರಿ ಕೆಲಸವು ಎಂಬ್ಯಾಕ್ ಮೆಂಟ್/ಕಾಂಕ್ರೀಟ್/ಡಾಂಬರೀಕರಣ–ಬಿಎಂ–ಬಿಸಿ/WMM-WBM ಕಾಮಗಾರಿಗಳಾಗಿದ್ದಲ್ಲಿ, MORT & H ಅನ್ವಯ ಗುಣಮಟ್ಟ ಪರೀಕ್ಷೆ ಹಾಗೂ Core-cut ಪರೀಕ್ಷೆಗಳನ್ನು ಕೈಗೊಂಡು ಫಲಿತಾಂಶವನ್ನು ಪಡೆದುಕೊಳ್ಳುವುದು.

ಕಾರ್ಯಪಾಲಕ ಅಭಿಯಂತರರು
ಬ್ಯಾಟರಾಯನಪುರ ವಿಭಾಗ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1) ಮಾನ್ಯ ವಲಯ ಆಯುಕ್ತರು (ಯಲಹಂಕ) ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ.
2) ಮಾನ್ಯ ಜಂಟಿ ಆಯುಕ್ತರು (ಯಲಹಂಕ) ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ.
3) ಮಾನ್ಯ ಮುಖ್ಯ ಅಭಿಯಂತರರು (ಯಲಹಂಕ) ವಲಯ, ಬಿ.ಬಿ.ಎಂ.ಪಿ ರವರ ಮಾಹಿತಿಗಾಗಿ.